ದಿನಾಂಕ: ಜನವರಿ 23, 2014

# ಭಾಜಪ ಅಧ್ಯಕ್ಷ ಶ್ರೀ ರಾಜನಾಥ್ ಸಿಂಗ್ ಅವರು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನದಂದು ನೀಡಿದ ಫೇಸ್‌ಬುಕ್ ಪ್ರಕಟಣೆ

“ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮಸ್ಥಳವಾದ ಕಟಕ್‌ನ ಒಡಿಯ ಬಜಾರ್‌ಗೆ ಇಂದು ಭೇಟಿ ನೀಡಿ, ಭಾರತದ ಸ್ವತಂತ್ರ ಸಂಗ್ರಾಮ ಇತಿಹಾಸದ ಮಹಾನ್ ನಾಯಕನಿಗೆ ನಮನಗಳನ್ನು ಸಲ್ಲಿಸಿದೆ.

ನೇತಾಜಿಯವರ ಸಾವು ಇಂದಿಗೂ ನಿಗೂಢವಾಗಿದೆ. ನೇತಾಜಿ ಸಾವು ಹಾಗೂ ಅದಕ್ಕೆ ಕಾರಣಗಳನ್ನು ಅರಿಯಲು ಇಡೀ ದೇಶ ಕಾತರದಿಂದಿದೆ.

ಜನರಿಗೆ ಸತ್ಯಗೊತ್ತಾಗಲು ಕೇಂದ್ರ ಸರ್ಕಾರ ಈ ನಿಗೂಢ ಸಾವಿನ ಕಾರಣಗಳನ್ನು ಬಹಿರಂಗ ಪಡಿಸಬೇಕು.”

ದಿನಾಂಕ: ಜನವರಿ 23, 2014

# <u>ಮಾರಲು ಇಲ್ಲ ತೋರಲು ಇಲ್ಲ</u>

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಪ್ರತಿಕೂಲ ರಾಜಕೀಯ ಪರಿಸ್ಥಿತಿಯಲ್ಲಿ ಸಂಘರ್ಷ ನಡೆಸುವ ಇಚ್ಛಾಶಕ್ತಿಯ ಕೊರತೆ ಪ್ರದರ್ಶಿಸಿದ ನಂತರ ಇಬ್ಬರು ಪ್ರಮುಖ ಯುಪಿಎ ಸಚಿವರು ತಮ್ಮ ಮನಸ್ಸು ಬಿಚ್ಚಿಟ್ಟಿದ್ದಾರೆ. ವಿಶ್ವ ಆರ್ಥಿಕ ವೇದಿಕೆಯಲ್ಲಿ ಭಾಗವಹಿಸಲು ಪಿ.ಚಿದಂಬರಂ ದೆವೋಸ್‌ನಲ್ಲಿದ್ದಾರೆ. ವಿವಿಧ ರಾಷ್ಟ್ರಗಳ ವಾಣಿಜ್ಯ ಧುರೀಣರು ಸೇರಿದಾಗ ಬಂಡವಾಳ ಆಕರ್ಷಿಸಲು ಭಾರತೀಯ ಆರ್ಥವ್ಯವಸ್ಥೆಯ ಆಕರ್ಷಣೀಯ ಅಂಶಗಳನ್ನು ತಿಳಿಸಬೇಕಿತ್ತು. ಆದರೆ ಇದರ ಬದಲು ಅವರು ಭಾಜಪ ಮತ್ತು ಮೋದಿಯ ಕುರಿತು ಮಾತನಾಡಬಯಸಿದರು. ರಾಷ್ಟ್ರೀಯ ಆರ್ಥವ್ಯವಸ್ಥೆ ನಿಭಾಯಿಸುವ ಸಾಮರ್ಥ್ಯ ಭಾಜಪಗೆ ಇಲ್ಲವೆಂದು ಅವರ ವಾದ. ಭಾರತದ ಅರ್ಥವ್ಯವಸ್ಥೆಯು 1998 ರಿಂದ 2004ರ ನಡುವೆ ಕಂಡ ಉತ್ತಮ ಪರಿಸ್ಥಿತಿಯನ್ನು ಸಭಿಕರು ಈ ವರೆಗೂ ಮರೆತಿಲ್ಲ. ಅಂದಿನ ಅರ್ಥವ್ಯವಸ್ಥೆ ಕುರಿತು ಟೀಕೆಗಳು ಕೇಳಿ ಬರುವುದಿಲ್ಲ. ಕಾಕತಾಳಿಯವೆಂಬಂತೆ, ಭಾಜಪ ಮತ್ತು ನರೇಂದ್ರ ಮೋದಿ ಅವರ ವಿರುದ್ಧ ಮಾತನಾಡಿದ ದಿವಸವೇ ಮೂಡೀಸ್ ಸಂಸ್ಥೆ ಭಾರತ ಕುರಿತ ವರದಿಯನ್ನು ಬಿಡುಗಡೆ ಮಾಡಿತ್ತು ಮತ್ತು ಇದರ ವರದಿ ಮಾಧ್ಯಮಗಳಲ್ಲಿ ದೊಡ್ಡಕ್ಷರಗಳಲ್ಲಿ ಮುದ್ರಿಸಲಾಗಿತ್ತು. ದೇಶದ ಆರ್ಥಿಕ ಕಾಯಕಲ್ಪಕ್ಕಾಗಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ರಾಜಕೀಯ ಬದಲಾವಣೆ ಆಗುವುದನ್ನೇ ಕೈಗಾರಿಕೆಗಳು ಕಾಯುತ್ತಿವೆ ಎಂದು ವರದಿ ತಿಳಿಸಿದೆ.

ಕಪಿಲ್ ಸಿಬಲ್ ಅವರು ತಮ್ಮ ಸ್ವಾಭಾವಿಕ ಶೈಲಿಯಲ್ಲೇ ವಿಪಕ್ಷದ ವಿರುದ್ಧ ಹರಿಹಾಯ್ದಿದ್ದಾರೆ. ನರೇಂದ್ರ ಮೋದಯವರನ್ನು ಸೇಲ್ಸಮ್ಯಾನ್ ಎಂದು ಹಾಗೂ ಅರವಿಂದ್ ಕೇಜ್ರಿವಾಲ್ ಅವರನ್ನು ಶೋ ಮ್ಯಾನ್ ಎಂದು ತಮ್ಮ ಬ್ಲಾಗ್‌ನಲ್ಲಿ ಕರೆದಿದ್ದಾರೆ. ಮಧ್ಯ ಪ್ರದೇಶ, ಛತ್ತಿಸ್‌ಘಡ್, ರಾಜಸ್ಥಾನ, ಗುಜರಾತ್ ಮತ್ತು ಗೋವಾ ರಾಜ್ಯಗಳು ಉತ್ತಮ ಆಳ್ವಿಕೆಯಿರುವ ರಾಜ್ಯಗಳು ಎಂಬ ಮಾನ್ಯತೆ ದೊರೆತಿದ್ದು ಅವುಗಳ ಒಟ್ಟು ದೇಶಿಯ ಉತ್ಪನ್ನ ವೃದ್ಧಿದರ ರಾಷ್ಟ್ರೀಯ ಸರಾಸರಿಗಿಂತಲೂ ಸಾಕಷ್ಟು ಅಧಿಕವಾಗಿದ್ದು, ಈ ರಾಜ್ಯಗಳಲ್ಲಿ ಮೂರು ರಾಜ್ಯಗಳು ಬಿಮಾರು ಅಂದರೆ ರೋಗಗ್ರಸ್ಥ ರಾಜ್ಯಗಳ ಪಟ್ಟಿಯಲ್ಲಿ ಸೇರಿದ್ದವು ಎಂಬ ಅಂಶವನ್ನು ಸಿಬಲ್ ಹಾಗೂ ಚಿದಂಬರಂ ಕಂಡೂಕಾಣದಂತಿದ್ದಾರೆ. ಮಧ್ಯಪ್ರದೇಶ ಮತ್ತು ಗುಜರಾತ್‌ನಲ್ಲಿ ಕೃಷಿ ವೃದ್ಧಿದರ ಎರಡಂಕಿಯಲ್ಲಿದ್ದು, ಇದರಿಂದ ಜನರು ಸುಭಿಕ್ಷರಾಗಿದ್ದಾರೆ.

ಆದರೂ ಕಪಿಲ್ ಸಿಬಲ್ ಅವರ ಸೇಲ್ಸಮ್ಯಾನ್ ಹೇಳಿಕೆ ಭಿನ್ನವಾಗಿದೆ. ಬಿ.ಎಸ್. ಯಡಿಯೂರಪ್ಪ ಭಾಜಪಗೆ ಮರಳಿರುವ ವಿಚಾರದಲ್ಲಿ ಮೋದಿ ಮೌನ ಸಾಧಿಸಲು ಕಾರಣವೇನು ಎಂದು ಅವರು ಕೇಳಿದ್ದಾರೆ. ಭಾಜಪ ಆಳ್ವಿಕೆಯ ಕೆಲವು ಅನ್ಯ ರಾಜ್ಯಗಳಲ್ಲಿ ಸಚಿವರು ಎದುರಿಸುತ್ತಿರುವ ಸಾಬೀತಾಗದ ಆರೋಪಗಳ ಬಗ್ಗೆಯೂ ಅವರು ಪ್ರಶ್ನಿಸಿದ್ದಾರೆ.

ಬಿ ಎಸ್ ಯಡಿಯೂರಪ್ಪ ಅವರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ ತಕ್ಷಣವೇ ಅವರ ರಾಜಿನಾಮೆಯನ್ನು ನಮ್ಮ ಪಕ್ಷ ಕೇಳಿತ್ತು. ಇದರಿಂದ ನಮ್ಮ ಕರ್ನಾಟಕ ಘಟಕ ಎರಡು ಹೋಳಾಯಿತು ಮತ್ತು ರಾಜ್ಯ ಸರ್ಕಾರ ಕೈತಪ್ಪಿತು. ಇಂದು ಯಾವುದೇ ಶರತ್ತಿಲ್ಲದೆ ಅವರು ಪಕ್ಷ ಸೇರಿದ್ದಾರೆ. ಅವರ ವಿರುದ್ಧದ ಕೆಲವು ಆರೋಪಗಳನ್ನು ಉಚ್ಚ ನ್ಯಾಯಾಲಯ ತಳ್ಳಿಹಾಕಿದೆ ಮತ್ತು

ಉಳಿದ ಕೆಲವು ಪ್ರಕರಣಗಳ ಕುರಿತು ವಿಚಾರಣೆ ಮುಂದುವರೆದಿದೆ. ಪಕ್ಷದಿಂದ ಅವರಿಗೆ ಯಾವುದೇ ಹುದ್ದೆ ನೀಡಲಾಗಿಲ್ಲ, ಅದರೆ ಅವರು ಪಕ್ಷಕ್ಕಾಗಿ ದುಡಿಯಲು ಬೇಶರತ್ ಒಪ್ಪಿಗೆ ನೀಡಿದ್ದಾರೆ.

ಇದಕ್ಕೆ ತದ್ವಿರುದ್ಧವಾಗಿ ಕಪಿಲ್ ಸಿಬಲ್ ಅವರ ಪಕ್ಷ ಅನುಸರಿಸುತ್ತಿರುವ ಮಾರ್ಗ ಗಮನಿಸಿ. ಶಿಕ್ಷೆಗೆ ಗುರಿಯಾದ ಲಾಲು ಪ್ರಸಾದ್ ಯಾದವ್ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಆ ಪಕ್ಷ ಒಪ್ಪಿದೆ. ಅದರ ಮಾಜಿ ಮುಖ್ಯ ಮಂತ್ರಿ ಅಶೋಕ್ ಚೌಹಾಣ್ ಅವರ ವಿರುದ್ಧ ಕ್ರಮ ಕೈಗೊಳ್ಳುವುದನ್ನು ತಪ್ಪಿಸಲು ರಾಜ್ಯಪಾಲರ ಅಂಕಿತ ನಿರಾಕರಿಸಲಾಗಿದೆ. 2ಜಿ ತರಂಗಾಂತರ ಹಾಗೂ ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಪ್ರಕರಣಗಳಲ್ಲಿ ಹಿಂದೆಂದು ಕಾಣದ ಬೃಹತ್ ಭ್ರಷ್ಟಾಚಾರ ಆರೋಪಗಳನ್ನು ಅವರ ಸರ್ಕಾರ ಎದುರಿಸುತ್ತಿದೆ. ಬಹಳಷ್ಟು ಕಲ್ಲಿದ್ದಲು ನಿಕ್ಷೇಪಗಳಲ್ಲಿ ಉತ್ಖನನ ಕಾರ್ಯ ಸ್ಥಗಿತವಾಗಿರುವ ಕಾರಣ ಭಾರತದ ವಿದ್ಯುತ್ ಕ್ಷೇತ್ರದಲ್ಲಿ ಸಮಸ್ಯೆ ತಲೆದೋರಿದೆ. ಹಿಮಾಚಲ ಪ್ರದೇಶದ ಮುಖ್ಯ ಮಂತ್ರಿ ವಿರುದ್ಧ ಚೆಕ್ ಮೂಲಕ ಅಕ್ರಮ ಹಣ ಬದಲಾವಣೆಯ ದೂರುಗಳು ಸಾಬೀತಾದರೂ ಅವರ ಪಕ್ಷದ ನಾಯಕರು ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಅವರ ನಾಯಕರ ಮಕ್ಕಳು ಹಾಗೂ ಅಳಿಯಂದಿರು ನಡೆಸಿರುವ ವಾಣಿಜ್ಯ ವಹಿವಾಟಿನ ಅರಿವು ಕಪಿಲ್ ಅವರಿಗೆ ಬಹುತೇಕವಿದೆ ಎಂದು ನನಗೆ ಗೊತ್ತಿದೆ. ದೇಶದ ಇತಿಹಾಸದಲ್ಲೇ ಅತಿ ಭ್ರಷ್ಟ ಸರ್ಕಾರವನ್ನು ಅವರ ಪಕ್ಷ ದೇಶಕ್ಕೆ ನೀಡಿದೆ. ಭಾರತೀಯ ಆರ್ಥಿಕ ಸ್ಥಿತಿಯ ಕುರಿತು ಹೂಡಿಕೆದಾರರ ಉತ್ಸಾಹ ಕುಂದಿದೆ. ದೇಶೀಯ ಹೂಡಿಕೆದಾರರು ವಿದೇಶಗಳಲ್ಲಿ ಹಣಹೂಡುವ ಹೊಸ ಪರಿಪಾಠ ಆರಂಭಿಸಿದ್ದಾರೆ. ಹಣದುಬ್ಬರ ಮತ್ತು ಭ್ರಷ್ಟಾಚಾರದಿಂದಾಗಿ ಇತ್ತೀಚೆಗೆ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಅವರ ಪಕ್ಷ ಹೀನಾಯ ಸೋಲು ಅನುಭವಿಸಿದೆ. ಪಕ್ಷ ಹಾಗೂ ಸರ್ಕಾರದಲ್ಲಿ ಅದರ ನಾಯಕರು ಕಾರ್ಯಸಾಧನೆಗೆ ಯೋಗ್ಯ ಸ್ಫೂರ್ತಿ ನೀಡುವಲ್ಲಿ ಸೋತಿದ್ದಾರೆ. ಕಳೆ ಕುಂದಿದ ಪಕ್ಷವಾಗಿ ತಾವು ಚುನಾವಣೆ ಎದುರಿಸಬೇಕಾಗಿದೆ ಎಂದು ಸ್ವತಃ ಅವರ ಹಣಕಾಸು ಸಚಿವರೆ ಒಪ್ಪಿಕೊಂಡಿದ್ದಾರೆ. ಭಾರತೀಯ ಸಂಸದೀಯ ಚುನಾವಣೆಗಳ ಇತಿಹಾಸದಲ್ಲೇ ಅತಿ ಕನಿಷ್ಠ ಸ್ಥಾನಗಳನ್ನು ಗಳಿಸುವ ಪರಿಸ್ಥಿತಿಯನ್ನು ಕಾಂಗ್ರೆಸ್ ಪಕ್ಷ ಎದುರಿಸುತ್ತಿದೆ.

ಅವರ ಪಕ್ಷ ವಿಪಕ್ಷಗಳ ನಾಯಕರನ್ನು ಸೇಲ್ಸಮ್ಯಾನ್ ಹಾಗೂ ಶೋಮ್ಯಾನ್ ಎಂದು ಜರಿಯಬಹುದು. ವಿಷಾದದ ಸಂಗತಿಯೆಂದರೆ, ದೇಶದ ಮತದಾರರಿಗೆ ಮಾರಲು ಅಥವಾ ಸಾಧನೆ ಪ್ರದರ್ಶಿಸಲು ಕಾಂಗ್ರೆಸ್ ಪಕ್ಷದ ಬಳಿ ಏನು ಇಲ್ಲ.

✲✲✲✲✲